ತಯಾರಿಸಲಾಗುತ್ತದೆ. ಗಾಢ ಕಪ್ಪು ಬಣ್ಣದ ಬೀಜಗಳನ್ನು ನಕ್ಷತ್ರಾಕಾರದಲ್ಲಿ ಇಟ್ಟು, ಅದರ ಮಧ್ಯೆ ಹೊಳೆಯುವ ಬಿಳಿಯ ಕಲ್ಲುಗಳನ್ನು ಸೇರಿಸಲಾಗುತ್ತದೆ. ಮಧ್ಯದಲ್ಲಿ ಹೊಳೆಯುವ ಬೇರೆ ಬೇರೆ ಕಲ್ಲಿನ ಹರಳು ಸೇರಿಸಿಯೂ ಕಿವಿಯೋಲೆ ತಯಾರಿಸಲಾಗುತ್ತದೆ. ಇದಲ್ಲದೇ ನಕ್ಷತ್ರಾಕಾರದ ದೊಡ್ಡ ಹರಳಿನ ಉಂಗುರಗಳಲ್ಲಿಯೂ ಸಪೋಟ ಬೀಜಗಳನ್ನು ಬಳಸಲಾಗುತ್ತದೆ. ವೈಜಯಂತಿ ಮಣಿಗಳೊಂದಿಗೆ ಸಪೋಟ ಬೀಜಗಳನ್ನು ಬಳಸಿ ಮಾಡುವ ಹಾರ ಸದ್ಯಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಿಕೊಂಡಿದೆ.

**ಕುಂಬಳಕಾಯಿ ಬೀಜ:** ಕುಂಬಳಕಾಯಿ ಬೀಜಗಳಿಗೆ ಕಾಮನಬಿಲ್ಲಿನ ಬಣ್ಣವನ್ನು ಬಳಿಯಿರಿ. ನಂತರ ಅದನ್ನು ಒತ್ತು ಒತ್ತಾಗಿ ಗಟ್ಟಿಯಾದ ದಾರದಲ್ಲಿ ಪೋಣಿಸಿ, ಡೋರಿ ಸೇರಿಸಿ. ತುಂಬಾ ಉದ್ದವೂ ಅಲ್ಲದ ಗಿಡ್ಡವೂ ಅಲ್ಲದ ಸರವೊಂದು ತಯಾರಿಸಿ. ಇದನ್ನು ಜೀನ್ಸ್ ಹಾಗೂ ಟಾಪ್ ಮೇಲೆ ಧರಿಸಿದರೆ ಹೆಚ್ಚು ಅಂದವಾಗಿ ಕಾಣಬಲ್ಲಿರಿ. ಅದರಲ್ಲಿಯೂ ಪಾಶ್ಚಿಮಾತ್ಯ ಉಡುಗೆಗಳಿಗೆ ಇಂಥ ಆಭರಣ ಸೂಕ್ತವೆನಿಸುತ್ತದೆ.

**ವೈಜಯಂತಿ ಮಾಲಾ:** ಭಗವಾನ್ ಕೃಷ್ಣನಿಗೆ ಪ್ರಿಯ ಎನಿಸಿಕೊಂಡಿರುವ ವೈಜಯಂತಿ ಮಾಲೆಯು ಜಪಮಾಲೆಯಾಗಿಯೂ ಗುರುತಿಸಿಕೊಂಡಿದೆ. ಆದರೆ, ಇದನ್ನು ಈಗ ಕಪ್ಪು ಬಣ್ಣದ ದಾರದಲ್ಲಿ ಪೋಣಿಸಿ, ಅದರ ಮಧ್ಯೆ ಇಷ್ಟವಾದ ಬೀಡ್ಸ್ ಅಥವಾ ಇತರೆ ಬೀಜಗಳನ್ನು ಸೇರಿಸಿ ದೊಡ್ಡ ಮಣಿಹಾರವನ್ನೇ ತಯಾರಿಸಲಾಗುತ್ತದೆ. ಇದು ಸೀರೆ ಹಾಗೂ ಇತರೆ ಸಾಂಪ್ರದಾಯಿಕ ಉಡುಗೆಗೆ ಚೆಂದವಾಗಿ ಒಪ್ಪುತ್ತದೆ.

**ಬಿದಿರಿನ ಆಭರಣ:** ದೇಸಿ ಕಲೆಗಳನ್ನು ಬಿದಿರಿನಲ್ಲಿ ಬಿಂಬಿಸಿ, ಅದನ್ನು ಆಭರಣವಾಗಿಸಲಾಗುತ್ತದೆ. ದೊಡ್ಡ ದೊಡ್ಡ ಪದಕಗಳು, ಕಿವಿಯೋಲೆಗಳಿಗೆ ಬಿದಿರು ಸೂಕ್ತವಾಗಿದೆ. ವರ್ಲಿ, ಮಿಥಿಲಾದಂಥ ದೇಸಿ ಕಲೆಯನ್ನು ಈ ಬಿದಿರಿನ ಮೇಲೆ ಪೇಂಟ್ ಮಾಡುವುದರಿಂದ ನೋಡಲು ಆಕರ್ಷಕವೆನಿಸುತ್ತದೆ. ಕಾಟನ್ ಸೀರೆಗಳು, ಕಾಟನ್ ದಿರಿಸಿನಲ್ಲಿ ಬಿದಿರಿನ ಆಭರಣವಿದ್ದರೆ ಸ್ನಿಗ್ಧತೆ ಹೆಚ್ಚುತ್ತದೆ. ಇಂಥ ಆಭರಣಗಳನ್ನು ಮನೆಯಲ್ಲಿಯೇ ಯಾರು ಬೇಕಾದರೂ ತಯಾರಿಸಬಹುದು. ಆದಷ್ಟು ಫ್ಯೂಷನ್ ಮಾದರಿಯಲ್ಲಿಯೇ ಬೀಡ್ಸ್ ಹಾಗೂ ಸೀಡ್ಸ್‌ಗಳನ್ನು ಬಳಸಿಯೂ ಆಭರಣಗಳನ್ನು ತಯಾರಿಸಿಕೊಳ್ಳಬಹುದು. ಚಿಕ್ಕ ಚಿಕ್ಕ ಬೀಜಗಳ ಮಧ್ಯೆ ದೊಡ್ಡ ದೊಡ್ಡ ತಟ್ಟೆಯಾಕಾರದ ಬೀಜಗಳನ್ನು ಬಳಸಿಯೂ ಅದಕ್ಕೆ ರೂಪ ನೀಡಬಹುದು.

ಬಹುತೇಕ ಎಲ್ಲ ಸಸ್ಯ ಹಾಗೂ ಹಣ್ಣಿನ ಬೀಜಗಳನ್ನು ಪ್ರಾಕೃತಿಕವಾಗಿಯೂ, ಆಧ್ಯಾತ್ಮಿಕ ದೃಷ್ಟಿಯಿಂದಲೂ ಸಂಪತ್ತಿನ ಸೂಚಕಗಳೆಂದು ಭಾವಿಸಲಾಗಿದೆ. ಹಾಗಾಗಿ ಇವು ಧನಾತ್ಮಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದೂ ನಂಬಲಾಗಿದೆ. ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯಗಳು ಪ್ರತಿಷ್ಠೆಯನ್ನು ಹೆಚ್ಚಿಸಬಲ್ಲವು. ಆದರೆ, ಈ ಬೀಜಗಳಿಂದ ತಯಾರಾಗುವ ಆಭರಣವನ್ನು ತೊಟ್ಟಾಗ ಒಂದು ಸಂತೃಪ್ತ ಭಾವ ಮೂಡುವುದರಲ್ಲಿ ಎರಡು ಮಾತಿಲ್ಲ. ತುಸು ಕೌಶಲ, ಸ್ವಲ್ಪ ತಾಳ್ಮೆ ಹಾಗೂ ಜಾಣ್ಮೆ ಇದ್ದರೆ ನಿಮ್ಮಿಷ್ಟದ ಆಭರಣವನ್ನು ನೀವೇ ಮನೆಯಲ್ಲಿ ತಯಾರಿಸಿಕೊಳ್ಳಬಹುದು.



## ಈ ಆಭರಣಗಳ ಲಾಭವೇನು?

- ಇವು ಬಹಳ ಸರಳ, ಅಷ್ಟೇ ಸುಂದರ. ಒಂದು ಕಪ್ಪು ದಾರವಿದ್ದು, ಅದಕ್ಕೆ ಇಷ್ಟದ ದೊಡ್ಡ ಆಕಾರದ ಒಂದೇ ಬೀಜವನ್ನು ಬಳಸಿ ಆಭರಣವನ್ನು ತಯಾರಿಸಿ ತೊಡಬಹುದು. ಬೇಕಿರುವುದು ಸ್ವಲ್ಪ ಸೃಜನಶೀಲತೆ ಅಷ್ಟೆ.
- ಬೇಕಾದಷ್ಟು ಬಾರಿ ಈ ಆಭರಣಗಳನ್ನು ತೊಟ್ಟು, ಅವುಗಳನ್ನು ಬಿಸಾಡಿದರೂ ಪ್ರಕೃತಿಯಲ್ಲಿ ಬೆರೆತು ಹೋಗುತ್ತವೆ. ಅವುಗಳಿಂದ ಪ್ರಕೃತಿಗೆ ಹಾನಿ ಇಲ್ಲ.
- ಒಂದೊಮ್ಮೆ ಆಭರಣ ಮುಕ್ಕಾದರೆ ಅಷ್ಟೇನೂ ಬೇಸರವೆನಿಸುವುದಿಲ್ಲ. ದುಬಾರಿ ಬೆಲೆ ತೆತ್ತು ಖರೀದಿಸಿದ ಆಭರಣಕ್ಕಿಂತ ಇವು ಸಾವಿರ ಪಾಲು ಮೇಲು.
- ಬಹಳ ಎಲಿಗೆಂಟ್ ಆದ, ಅಷ್ಟೆ ವಿಭಿನ್ನ ಎನಿಸುವ ಆಭರಣಗಳಿವು. ದಿರಿಸು, ಹಾಗೂ ಬಣ್ಣಕ್ಕೆ ಸೂಕ್ತವೆನಿಸುವುದನ್ನು ಆಯ್ಕೆ ಮಾಡಿಕೊಳ್ಳಬಹುದು.
- ಇವುಗಳನ್ನು ಮನೆಯಲ್ಲಿ ತಯಾರಿಸ ಬಹುದಾದ್ದರಿಂದ, ಪಾಕೆಟ್ ಸ್ನೇಹಿಯಾಗಿರುತ್ತದೆ. ಜತೆಗೆ ಸಮಯವನ್ನು ಸದುಪಯೋಗ ಮಾಡಿಕೊಂಡ ಖುಷಿಯೂ ನಿಮ್ಮದಾಗುತ್ತದೆ.
- ಇವುಗಳು ನೈಸರ್ಗಿಕವಾಗಿ ಇರುವುದಷ್ಟೆ ಅಲ್ಲ, ನಮ್ಯವಾಗಿರುವುದರಿಂದ ಇತರೆ ಬೀಡ್ಸ್ ಹಾಗೂ ಲೋಹಗಳೊಂದಿಗೆ ಹೊಂದಿಸಿಯೂ ಫ್ಯೂಷನ್‌ನಂತೆ ತೊಡಬಹುದು.

## ಆಭರಣ ತಯಾರಿಸುವಾಗ...

- ಮೊದಲಿಗೆ ನಶಿಸುತ್ತಿರುವ ಯಾವುದೇ ಹಣ್ಣು ಹಾಗೂ ಸಸ್ಯಗಳ ಬೀಜಗಳನ್ನು ಆಭರಣ ತಯಾರಿಕೆಯಲ್ಲಿ ಬಳಸದೇ ಇರುವುದು ಸೂಕ್ತ.
- ಬೀನ್ಸ್ ಬೀಜಗಳಿಂದ ಆಭರಣ ತಯಾರಿಸುತ್ತೀರಾ ಎಂದಾದರೆ, ಬೀನ್ಸ್ ಬೀಜಗಳನ್ನು ಚೆನ್ನಾಗಿ ಒಣಗಿಸಿ. ಯಾವುದೇ ಬೀಜಗಳಾದರೂ ಚೆನ್ನಾಗಿ ಒಣಗಿಸಿ ಬಳಸಿ. ಆಭರಣ ತಯಾರಿಕೆಗೆಂದು ತುಸು ಜಾಸ್ತಿ ಪ್ರಮಾಣದಲ್ಲಿ ಬೀಜಗಳನ್ನು ಶೇಖರಿಸಿಟ್ಟುಕೊಳ್ಳಿ. ಸೂಜಿಯಲ್ಲಿ ಪೋಣಿಸುವಾಗ ಕೆಲವು ಬೀಜಗಳು ಮುರಿಯಬಹುದು.
- ಕೆಲವು ಬೀಜಗಳು ನಮ್ಯವಾಗಿರುವುದಿಲ್ಲ. ಅವುಗಳ ಗುಣ ಹಾಗೂ ಸ್ವಭಾವವನ್ನು ಆಧರಿಸಿ, ಅದರ ಮೇಲೆ ಯಾವ ರೀತಿಯ ಆಭರಣ ತಯಾರಿಸುವುದು ಸೂಕ್ತ ಎಂಬುದನ್ನು ಯೋಚಿಸಿ.
- ಆದಷ್ಟು ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸದೇ ನೈಸರ್ಗಿಕವಾಗಿ ಬೀಜಗಳನ್ನು ಬಳಸಿದರೆ ತೊಡುವವರ ಆರೋಗ್ಯದ ದೃಷ್ಟಿಯಿಂದ ಉತ್ತಮವೆನಿಸುತ್ತದೆ.
- ಕೆಲವು ಬೀಜಗಳು ಎಷ್ಟೇ ವರ್ಷಗಳಾದರೂ ಹಾಳಾಗುವುದಿಲ್ಲ. ಅಂಥ ಬೀಜಗಳನ್ನು ಬಳಸಿ ಉತ್ತಮ ಆಭರಣ ತಯಾರಿಸಬಹುದು.